ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಬೈರೇನಹಳ್ಳಿ ಎಂಬ ಪುಟ್ಟ ಗ್ರಾಮದ ಡಾ. ನಾಗರಾಜು ಜಿ.ಬಿ, ಬೈರೇನಹಳ್ಳಿ ಪ್ರಸ್ತುತ ಒಮಾನ್ ದೇಶದ ಮಸ್ಕತ್ ನಗರದಲ್ಲಿದ್ದಾರೆ. ವೃತ್ತಿಯಿಂದ ಹೃದಯರೋಗ ತಜ್ಞರು. ಸಾಹಿತ್ಯದ ಬಗ್ಗೆ ಅಪರಿಮಿತ ಪ್ರೀತಿ. ಕಥೆ–ಕವಿತೆಗಳ ಮೂಲಕ ಸಮಾಜದ ಹೃದಯ ಅರ್ಥ ಮಾಡಿಕೊಳ್ಳುವಲ್ಲಿ ಆಸಕ್ತಿ. 'ಬೆಂಬಿಡದ ಗುಂಗು' ಕವನ ಸಂಕಲನ ಹಾಗೂ 'ಮಾಯಾಜಿಂಕೆ' ಕಾದಂಬರಿ ಪ್ರಕಟಿತ ಕೃತಿಗಳು.

ಬದುಕಲು ಬಿಡುತ್ತಿಲ್ಲವಲ್ಲ ಎಂದುಕೊಂಡ.

ದೊಡ್ಡ ಆಲದಮರದ ಬುಡದಲ್ಲಿ ನಿಂತಿದ್ದ ಶ್ರೀಕಂಠನಿಗೆ ಸ್ವಲ್ಪ ದೂರದಲ್ಲಿದ್ದ ಮರ್ಕ್ಯುರಿ ದೀಪದ ಬೆಳಕಿನಲ್ಲಿ ಇನ್ನೂ ಸಣ್ಣದಾಗಿ ಮಳೆ ಹನಿಯುತ್ತಿರುವುದು ಕಾಣಿಸುತ್ತಿತ್ತು. ತಾನು ನಿಂತಿದ್ದ ಮರದ ಕೆಳಗೆ ಪೂರ್ತಿ ಕತ್ತಲಾವರಿಸಿತ್ತು. ರಸ್ತೆಗಳು ನಿರ್ಜನವಾಗಿದ್ದವು. ಜನರೆಲ್ಲಾ ಈಗಾಗಲೇ ತಮ್ಮ ತಮ್ಮ ಗೂಡುಗಳನ್ನು ಸೇರಿಕೊಂಡು, ನೆಮ್ಮದಿಯಾಗಿ ಊಟ ಮಾಡಿ, ಟೀವಿ ನೋಡುತ್ತಾ ಬೆಚ್ಚಗೆ ಕುಟುಂಬದವರೊಂದಿಗೆ ಮಾತನಾಡುತ್ತಾ ಕುಳಿತಿರುತ್ತಾರೆ. ಆದರೆ, ತಾನು ಮಾತ್ರ ಒಂಟಿ ಪಿಶಾಚಿಯ ರೀತಿ ಈ ಮರದ ಕೆಳಗೆ ನಿಂತಿದ್ದೇನೆ. ಕಾರಿನವನು, "ಥೂ ದರಿದ್ರದ ನನ್ನಮಕ್ಕಳಾ" ಎಂದು ಬೈಯ್ದದ್ದು ನೆನಪಾಯಿತು. ಯಾಕೋ ಇಡೀ ಪ್ರಪಂಚ ತನಗೆದುರಾಗಿದೆ, ತಾನು ಒಬ್ಬಂಟಿಯಾದೆ ಎನಿಸಿತು. ಜೀವನದಲ್ಲಿ ಎದುರಾಗುತ್ತಿರುವ ಕಷ್ಟಗಳು ಮತ್ತು ಆಸರೆಗಾಗಿ ಯಾರೂ ಇಲ್ಲದ ತಬ್ಬಲಿತನ ಎಲ್ಲಾ ಕೂಡಿ ಮನಸ್ಸು ಭಾರವಾಗಿ, ಭಾವನೆಗಳ ಮೋಡ ಕರಗಿ ಕಣ್ಣೀರಾಗಿ ಧುಮ್ಮಿಕ್ಕತೊಡಗಿತು.

ಯಾರ ಎದುರೂ ತನ್ನ ಕಷ್ಟಗಳನ್ನು ಹಂಚಿಕೊಳ್ಳಲು ಒಪ್ಪದ, ಮಹಾ ಹಟಮಾರಿ ಶ್ರೀಕಂಠನಿಗೆ ಕತ್ತಲಲ್ಲಿ ಒಂಟಿಯಾಗಿ ನಿಂತಾಗ ಕಣ್ಣೀರನ್ನು ತಡೆಯಲಾಗಲಿಲ್ಲ, ಉಮ್ಮಳಿಸಿ ಬರುತ್ತಿದ್ದ ದುಃಖದ ಪ್ರವಾಹವನ್ನು ತಡೆಯಲಾಗಲಿಲ್ಲ. ಯಾವ್ಯಾವುದೋ ನೆನಪುಗಳು, ಮಾಡಿದ ತಪ್ಪುಗಳು, ಕೈಕೊಟ್ಟ ಅದೃಷ್ಟ, ಹತಾಶೆ, ಸ್ವಮರುಕ ಹೀಗೆ ಎಲ್ಲವೂ ಕಣ್ಣೀರ ಮೂಲಕ ಹೊರಬರತೊಡಗಿದವು. ಮನದ ಭಾರ ಕಡಿಮೆಯಾದಾಗ ಕಣ್ಣೀರು ನಿಂತಿತು. ಆಗಸದಲ್ಲಿ ಕಪ್ಪನೆಯ ಮೋಡಗಳೆಲ್ಲಾ ಕರಗಿ ಮಳೆಯು ನಿಂತು, ನಕ್ಷತ್ರಗಳು ಮೂಡತೊಡಗಿದವು. ರಸ್ತೆಯ ಪಕ್ಕದ ರಾಜಾಕಾಲುವೆ ತುಂಬಿ ಹರಿಯುತ್ತಿತ್ತು. ಆ ಕಾಲುವೆಯ ಅಕ್ಕಪಕ್ಕದ ಪುಟ್ಟಪುಟ್ಟ ಮನೆಯವರು ಬಾಗಿಲು ತೆರೆದುಕೊಂಡು ಮನೆಯ ಒಳಗೆ ನುಗ್ಗಿದ್ದ ಮಳೆಯ ನೀರನ್ನು ಎತ್ತಿ ಹೊರಗೆ ಹಾಕುತ್ತಿದ್ದರು.

ಬೆಂಗಳೂರಿನಲ್ಲಿ ಎಲ್ಲರೂ ಮಳೆಯಿಂದ ಸಂತ್ರಸ್ತರೇ, ಎಲ್ಲರೂ ಮಳೆಯನ್ನು ದೂಷಿಸುವವರೇ. ಮಳೆಯಿಂದ ವ್ಯಾಪಾರಿಗಳಿಗೆ ಕಷ್ಟ, ವಾಹನ ಸವಾರರಿಗೆ ಫಜೀತಿ, ತಗ್ಗುಪ್ರದೇಶದ ಮನೆಯವರಿಗೆಲ್ಲಾ ರಾತ್ರಿ ಪೂರ್ತಿ ಜಾಗರಣೆ. ಇಲ್ಲಿ ಬೇಡವೆಂದರೂ ಯಥೇಚ್ಛವಾಗಿ ಸುರಿಯುವ ಮಳೆ, ಅಗತ್ಯವಿರುವ ಹಳ್ಳಿಗಳಲ್ಲಿ ಮಾತ್ರ ಮಹಾ ಜಿಪುಣತನ ತೋರುತ್ತದೆ. ಕಾಲಕಾಲಕ್ಕೆ ಮಳೆ ಬಂದಿದ್ದರೆ ತಾನೇಕೆ ಹೀಗೆ ಬೆಂಗಳೂರಿಗೆ ಓಡಿ ಬಂದು, ಬೀದಿಬೀದಿಯಲ್ಲಿ ಹಣ್ಣು ಮಾರುತ್ತಾ, ಅಪರಿಚಿತರಿಂದ ಹೀಗೆ ಹೀನಾಯವಾಗಿ ಬೈಯಿಸಿಕೊಂಡು ಜೀವನ ನಡೆಸಬೇಕಿತ್ತು, ಎಂದು ಯೋಚಿಸತೊಡಗಿದ ಶ್ರೀಕಂಠನ ಮನಸ್ಸು ಮತ್ತಷ್ಟು ಭಾರವಾಯಿತು.

ಶ್ರೀಕಂಠನ ತಂದೆ ಮಧ್ಯಮ ವರ್ಗದ ರೈತಾಪಿ ಕುಟುಂಬಕ್ಕೆ ಸೇರಿದವರಾಗಿದ್ದು, ತಮಗಿದ್ದ ನಾಲ್ಕು ಎಕರೆ ಖುಷ್ಕಿ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಒಂದು ಮಟ್ಟಿಗೆ ನೆಮ್ಮದಿಯ ಜೀವನ ನಡೆಸುತ್ತಿದ್ದರು. ತಮಗಿದ್ದ ಇಬ್ಬರು ಮಕ್ಕಳಾದ ನಂಜುಂಡ ಮತ್ತು ಶ್ರೀಕಂಠನಿಗೆ ಮದುವೆ ಮಾಡಿ ಇಹಲೋಕ ತ್ಯಜಿಸಿದ್ದರು. ತಾಯಿಯನ್ನೂ ಸಹ ಚಿಕ್ಕ ವಯಸ್ಸಿನಲ್ಲಿಯೇ ಕಳೆದುಕೊಂಡಿದ್ದ ಇಬ್ಬರಲ್ಲಿ ದೊಡ್ಡವನಾದ ನಂಜುಂಡನಿಗೆ ತಾಳ್ಮೆ ಮತ್ತು ಪ್ರೀತಿಸುವ ಗುಣಗಳು ತಾಯಿಯಿಂದ ಬಂದಿದ್ದವು. ಕಿರಿಯವನಾದ ಶ್ರೀಕಂಠನಿಗೆ ತಂದೆಯ ಸಿಡುಕು ಬುದ್ಧಿ, ಅಸೂಯೆ ಮತ್ತು ಕೋಪ ಸ್ವಲ್ಪ ಜಾಸ್ತಿಯೇ ಬಂದಿದ್ದವು. ಆದರೆ, ಮನೆಗೆ ಬಂದ ಸೊಸೆಯರು ಮಾತ್ರ ಬಡತನದ ಹಿನ್ನೆಲೆಯಿಂದ ಬಂದವರಾದ್ದರಿಂದಲೋ ಏನೋ ಒಬ್ಬರಿಗೊಬ್ಬರು ಅಕ್ಕತಂಗಿಯರಂತೆ ಅನ್ಯೋನ್ಯವಾಗಿ ಸಂಸಾರ ತೂಗಿಸಿಕೊಂಡು ಹೋಗುತ್ತಿದ್ದರು. ಹಿರಿಯವನಾದ ನಂಜುಂಡನಿಗೆ ಸಹನಾ ಎಂಬ